# ನೀರಿನ ಪಾಠಗಳು

ನೀರು ದಾಹ ನೀಗುತ್ತದೆ. ನೀರಿಗೇ ದಾಹವಾದಾಗ ಜನ, ಊರುಕೇರಿಗಳೇ ಹಾರವಾಗುತ್ತವೆ.

ನೀರಿಗೆ ದಾಹ ಯಾಕಾಗುತ್ತದೆ?

ಈ ಪ್ರಶ್ನೆಗೆ ಬಹುತೇಕ ಸಂದರ್ಭಗಳಲ್ಲಿ ಹೊಂದುವ ಉತ್ತರ: 'ಮನುಷ್ಯನ ಹಸ್ತಕ್ಷೇಪದಿಂದಾಗಿ ನೀರಿಗೆ ದಾಹವಾಗುತ್ತದೆ'. ಜೀವಿಗಳ ಬಾಯಾರಿಕೆ ತಣಿಸುವ ನೀರು ತನ್ನ ದಾಹಕ್ಕಾಗಿ ಮನುಷ್ಯನನ್ನೇ ಬಲಿ ತೆಗೆದುಕೊಳ್ಳುತ್ತದೆ; ಅನ್ನಪೂರ್ಣೆ ಪೂತನಿಯಾದಂತೆ.

ನೀರಿಗೂ ಮನುಷ್ಯನಿಗೂ ಇರುವ ಸಂಬಂಜ ದೊಡ್ಡದು. ನದಿ ಬಯಲುಗಳಲ್ಲಿ ನಾಗರಿಕತೆಗಳು ವಿಕಾಸಗೊಂಡವು. ನೀರ ಕರುಣೆಯ ಬಯಲಿನಲ್ಲಿ ಬದುಕಿನ ಗುಟ್ಟುಗಳನ್ನು ಮನುಷ್ಯ ಕಂಡುಕೊಂಡ. ಆ ಕಾರಣದಿಂದಲೇ ನೀರೆಂಬುದು ಮನುಷ್ಯನ ಬಹು ದೊಡ್ಡ ಗುರು. ಆದರೆ, ನೀರೆಂಬ ಗುರುವಿನಿಂದ ನಾವು ಪಾಠಗಳನ್ನು ಕಲಿತೆವೆ?

ನೀರು ದಾಹವನ್ನು ತಣಿಸುತ್ತದೆ ಎನ್ನುವುದು ಪ್ರತಿಯೊಬ್ಬರ ಅನುಭವಕ್ಕೆ ನಿಲುಕುವ ನಿತ್ಯಸತ್ಯ. ದಾಹ ತಣಿಸುವ, ಜೀವ ಪೊರೆಯುವ ನೀರನ್ನು ಮಯ್ಯಿ ನಿರ್ಮಲವಾಗಿಸಿಕೊಳ್ಳಲೂ ಬಳಸುತ್ತೇವೆ. ಧರಿಸಿದ ಬಟ್ಟೆಗಳನ್ನು ತೊಳೆಯಲು, ನಡೆವ ಬಟ್ಟೆಗಳನ್ನು ಮಡಿಯಾಗಿಸಲು ದೂಳಡಗಿಸಲು ನೀರು ಬಳಕೆಯಾಗುತ್ತದೆ. ನೀರು ಎಲ್ಲವನ್ನೂ ತೊಳೆಯಬಲ್ಲದು. ದೇಹದ ಕೊಳೆಯನ್ನು ತೊಳೆಯುವ ನೀರು, ದೇಹ ಎಸಗಿದ ಪಾಪಕೃತ್ಯಗಳ ಕಲೆಯನ್ನೂ ತೊಳೆಯುತ್ತದೆಂದು ಹಲವರು ನಂಬುತ್ತಾರೆ. ಆ ನಂಬಿಕೆಯಿಂದಲೇ ಕೋಟಿ ಕೋಟಿ ಜನ ನದಿಗಳಲ್ಲಿ 'ಪುಣ್ಯಸ್ನಾನ' ಮಾಡುತ್ತಾರೆ. ಕುಂಭಮೇಳದ ಹೆಸರಿನಲ್ಲಿ ಅಸಂಖ್ಯ ಜನರ ಭಾವಕೋಶಗಳಲ್ಲಿ ನೀರತೇರು ಹರಿಯುತ್ತದೆ. ನೀರು ಪಾಪವನ್ನು ತೊಳೆಯುತ್ತದೋ ಇಲ್ಲವೋ ಎನ್ನುವುದು ನಂಬಿಕೆಗೆ ಸಂಬಂಧಿಸಿದ ಸಂಗತಿಯಾದರೂ, ನೀರು ಪಾಪನಾಶಕವೆನ್ನುವ ನಂಬಿಕೆ ಜಲಸಂಸ್ಕೃತಿಯೊಂದಿಗೆ ಮನುಷ್ಯ ಹೊಂದಿರುವ ಅವಿನಾಭಾವ ಸಂಬಂಧದ ಸಂಕೇತ.

ಗುರುವಷ್ಟೇ ಅಲ್ಲ, ನೀರು ಮಾತೃಸ್ವರೂಪಿಯೂ ಹೌದು. ಕೋಟಿ ಕೋಟಿ ಜನರು ಮಿಂದೇಳುವ ನದಿಗಿಂತಲೂ ಮಿಗಿಲಾದ ತಾಯಿಯುಂಟೆ? ಈ ತಾಯಿ ಹಾಲುಣಿಸುತ್ತಾಳೆ; ಗದ್ದೆಬಯಲುಗಳಲ್ಲಿ ಹಸಿರುಕಾವ್ಯ ಬರೆಯುವ ಮೂಲಕ ಅನ್ನಕ್ಕೆ ಜೀವಶಕ್ತಿಯಾಗುತ್ತಾಳೆ. ತಾಯಿಯ ಮಡಿಲು ಮಕ್ಕಳ ತಪ್ಪುಗಳನ್ನು ಹುದುಗಿಸಿಟ್ಟುಕೊಳ್ಳುತ್ತದಷ್ಟೇ. ಕರುಣೆಯ ಈ ಒಡಲು ನೀರಿಗೂ ಇದೆ. ಭೂತಾಯಿಯಷ್ಟೇ ಅಲ್ಲ, ಗಂಗಮ್ಮನೂ ಕ್ಷಮಯಾಧರಿತ್ರಿ.

ಮೀಯುವ ಮುಳುಗೇಳುವ ಕ್ರಿಯೆ ನದಿಯನ್ನು ಬಗ್ಗಡಗೊಳಿಸುವಂತಹದ್ದು. ನದಿಯೊಡಲಲ್ಲಿ ಏನೆಲ್ಲ ತುಂಬುತ್ತೇವೆ? ಮಲಮೂತ್ರ, ಪ್ಲಾಸ್ಟಿಕ್ ಕಸ, ರಾಸಾಯನಿಕಗಳ ತ್ಯಾಜ್ಯ – ಎಲ್ಲವನ್ನೂ ತುಂಬುವ ಮೂಲಕ ನದಿಗಳನ್ನು ತಿಪ್ಪೇಗುಂಡಿಗಳನ್ನಾಗಿಸಿದ್ದೇವೆ. ಇಷ್ಟು ಸಾಲದೆನ್ನುವಂತೆ ನದಿಯ ಮಯ್ಯನ್ನು ಬಗೆದು, ಹೊಯಿಗೆಯನ್ನು ಹೊತ್ತೊಯ್ಯುತ್ತೇವೆ; ಅಮ್ಮನೆದೆಯಿಂದ ರಕ್ತವನ್ನು ಹೀರುವಂತೆ. ಮರಳು ರೂಪದ ಜಂಗಮ ನದಿ ನಾಗರಿಕತೆಯ ಸಂಕೇತಗಳಲ್ಲಿ ಸ್ಥಾವರರೂಪ ಪಡೆದುಕೊಳ್ಳುತ್ತದೆ.

ಮನುಷ್ಯನ ಹಸ್ತಕ್ಷೇಪದಿಂದಾಗಿ ವಿರೂಪಗೊಳ್ಳದ ನದಿಪಾತ್ರವೊಂದೂ ಇರಲಿಕ್ಕಿಲ್ಲ. ನದಿಯೊಂದಿಗಿನ ನಿರಂತರ ಸಂಪರ್ಕದಿಂದ ಕಲ್ಲೂ ಕರಗಬಲ್ಲದು, ನುಣುಪಾಗುವುದು. ನಮ್ಮ ಮನಸ್ಸು ಪಾಷಾಣಕ್ಕಿಂತಲೂ ಕಠಿಣ. ನದಿಯ ಸಂಗದಲ್ಲಿ ಸಹಸ್ರಾರು ವರ್ಷಗಳನ್ನು ಕಳೆದಿದ್ದೇವೆ. ನಾಗರಿಕತೆಯ ಕಾಲಚಕ್ರದಲ್ಲಿ ನಾವು ಕಲಿತಿದ್ದೇನು? ಈ ಪ್ರಶ್ನೆಗೆ ಉತ್ತರರೂಪದಲ್ಲಿ ಮಲಿನಗೊಂಡು ಚಹರೆ ಕಳೆದುಕೊಂಡ ನದಿಗಳನ್ನೇ ಗಮನಿಸಬಹುದು.

ಯಾವ ನೀರನ್ನು ಪವಿತ್ರ, ಪಾಪನಾಶಕವೆಂದು ನಂಬಿರುವೆವೋ, ಅದೇ ನೀರಿಗೆ ಸಂಬಂಧಿಸಿದಂತೆ ನಮ್ಮ ಕೆಲವು ವರ್ತನೆಗಳು ಪಾಪಮಯವಾಗಿರುತ್ತವೆ. ಮೈಲಿಗೆ ತೊಳೆಯುವ ನೀರು ಯಾರೋ ಮುಟ್ಟಿದ್ದಕ್ಕಾಗಿ ಮೈಲಿಗೆಯಾಯಿತೆಂದು ಸಿಡಿಮಿಡಿಯಾಗುತ್ತೇವೆ. ಕುಡಿಯುವ ನೀರಿನ ಹೆಸರಿನಲ್ಲಿ ತರತಮಗಳನ್ನು ಎಸಗಿ, ರಕ್ತ ಹರಿಸಿದ ಉದಾಹರಣೆಗಳು ಇತಿಹಾಸದುದ್ದಕ್ಕೂ ಇವೆ; ವರ್ತಮಾನದಲ್ಲೂ ಸಾಕಷ್ಟಿವೆ. ನೀರನ್ನು ಪಾಪನಾಶಕವೆಂದು ನಂಬಿಯೂ, ಆ ನೀರ ಹೆಸರಿನಲ್ಲಿ ಅಸ್ಪೃಶ್ಯತೆಯನ್ನು ಆಚರಿಸುತ್ತೇವೆ.

ಗಂಗೆ ಎನ್ನುವುದು ನದಿಯ ಹೆಸರಷ್ಟೇ ಅಲ್ಲ; ಅದು ನೀರ ಹೆಸರು. ಬಾವಿ ಕೆರೆ ಕಟ್ಟೆ ಹಳ್ಳ ತೊರೆ ಕಡಲು – ಎಲ್ಲೆಡೆಯ ನೀರೂ ಗಂಗೆಯೇ. 'ನೀರೆಲ್ಲವೂ ತೀರ್ಥ' ಎಂದರು ಕುವೆಂಪು. ಹಾಗೆಂದು ಎಲ್ಲ ನೀರನ್ನೂ ಕುಡಿಯುವುದಿಲ್ಲ; ಎಲ್ಲ ಮೀಯುವಿಕೆಯೂ ಪುಣ್ಯಸ್ನಾನ ಎನ್ನಿಸಿಕೊಳ್ಳುವುದಿಲ್ಲ. ಈ ವೈರುಧ್ಯವನ್ನು ಗೋಪಾಲಕೃಷ್ಣ ಅಡಿಗರ 'ನೆಲ ಸಪಾಟಿಲ್ಲ' ಕವಿತೆ ಮಾರ್ಮಿಕವಾಗಿ ಚಿತ್ರಿಸುತ್ತದೆ.

'ನೆಲ ಸಪಾಟಿಲ್ಲ: ಹೊಳೆ, ಕೆರೆ, ಬಾವಿ, ಹಳ್ಳ, ಕೊಳ್ಳ, / ಗೊಬ್ಬರ ಗುಂಡಿ – ಹೀಗೆ / ತಗ್ಗುಗಳು, ಏರುಗಳು, ಮುಗ್ಗರಿಸುವುದು ಸಹಜ. / ತಗ್ಗುಗಳಲ್ಲಿ ನೀರು ತುಂಬುತ್ತದೆ. ಸಕಲ ಕುಂಡೀ ತೀರ್ಥ / ಯಾರಿಗೂ ಬೇಡ. ಹರಿವ ನೀರೆಂಥದೇ ಇರಲಿ ಯಾವುದೇ / ಅಭ್ಯಂತರಗಳಿಲ್ಲ' ಎನ್ನುವ ಕವಿ, 'ಬಾವಿಯ ನೀರು ಕುಡಿಯಲಾಗುತ್ತದೆ, ಕೆಸರು ತುಂಬಿದ್ದರೂ, ಪಾಚಿ ಮುಚ್ಚಿದ್ದರೂ ಕೂಡ. / ಆದರೆ ಎಷ್ಟೊಂದು ಭವ್ಯವಿದ್ದರೂ ಕೂಡ ಕಡಲ ನೀರ ಕುಡಿಯಲಾಗುವುದಿಲ್ಲ. / ನೀರಿನ ಮೇಲೆ ಜಗದಾತ್ಮ ಸೂರ್ಯನ ಲಕ್ಷ ಲಕ್ಷ ಕೈ ಆಡತೊಡಗಿದರೆ / ಜಮ್ಮು, ಕಂಪನ, ರೂಪಚ್ಛೇದ, ರೂಪಾಂತರ; / ಆವಿಯಾದಾಗಲೇ ನೀರು / ಶುದ್ಧ ಸ್ವರೂಪ, ಆಕಾಶ ಪ್ರತಾಪ, ವಿದ್ಯುದ್ದೀಪ, ಧಾರಾಕಾರ ಸೇಕ' ಎನ್ನುತ್ತಾರೆ. ಸಪಾಟಿಲ್ಲದ ನೆಲದ ಕವಿತೆ ಕೊನೆಗೊಳ್ಳುವುದು ಹೀಗೆ: 'ಆಕಾಶ ಸೇರಿದರೆ ಅಲ್ಲಿ ಹೊಂಡದ ನೀರು, ತೀರ್ಥ, ಬಾವಿಯ ನೀರು / ಕಡಲುಪ್ಪು ನೀರು. ಚರಂಡಿಯಲ್ಲಿ ಕೊಳೆಯುವ ನೀರು / ಎಲ್ಲ ಒಂದಾಗುವುದು; / ಜಾತಿ ಎಲ್ಲಿದೆ ಹೇಳು? ಇಲ್ಲಿ ಮಣ್ಣಲ್ಲಿ ನೆಟ್ಟಾಗ'.

ಮಣ್ಣಿಗೆ ಬಿದ್ದ ನೀರು ತನ್ನ ಜಾತ್ಯತೀತ ಸ್ವರೂಪವನ್ನು ಕಳೆದುಕೊಳ್ಳುತ್ತದೆ ಎನ್ನುವ ಕವಿತೆ, ಎಲ್ಲ ಮಾನವೀಯ ಸಂಗತಿಗಳಲ್ಲೂ ಮನುಷ್ಯ ಹಸ್ತಕ್ಷೇಪ ಮಾಡುವುದರ ಬಗ್ಗೆ ಗಮನಸೆಳೆಯುತ್ತದೆ. ನೀರಿನ ಮೂಲಕ ಸಮಾಜದಲ್ಲಿನ ಜಾತೀಯತೆಯ ಸ್ವರೂಪ ಕಟ್ಟಿಕೊಡುವ ಕವಿತೆ, ಜಾತೀಯತೆಯನ್ನು ಸಮರ್ಥಿಸುವ ಪಥ್ಯದಂತೆಯೂ ಕೆಲವರಿಗೆ ಕಂಡಿದೆ. ನೀರು ನಿರಾಕಾರ. ಪಾತ್ರೆಯ ಆಕಾರವೇ ನೀರಿನದ್ದೂ.

ಮಿಂದಾಗ ಮಯ್ಯಿಯ ಜೊತೆಗೆ ಮನಸ್ಸೂ ಒದ್ದೆಯಾಗಿ, ಒಳಗಲ ಒದ್ದೆ ಸದಾ ಉಳಿದಾಗಲಷ್ಟೇ ನೀರಿನೊಂದಿಗಿನ ನಮ್ಮ ನಂಟಿಗೆ ಅರ್ಥ.

**■ ಚಂಪಕಮಾಲಾ**

## ಮಾತೇ ಮುತ್ತು

- ರೋಗ ಗುಣವಾದ ಮೇಲೆಯೂ ಮತ್ತೆ ಮತ್ತೆ ನೆನೆಯುತ್ತಿರುವುದು ಆರೋಗ್ಯ ಲಕ್ಷಣ ಅಲ್ಲ.
  —ಕುವೆಂಪು
- ನಿಮ್ಮ ಕೋಪಕ್ಕಾಗಿ ನಿಮ್ಮನ್ನು ಶಿಕ್ಷಿಸಲಾಗುವುದಿಲ್ಲ. ನಿಮ್ಮ ಕೋಪವೇ ನಿಮ್ಮನ್ನು ಶಿಕ್ಷಿಸುತ್ತದೆ.
  —ಗೌತಮ ಬುದ್ಧ
- ನನ್ನ ದೇಹದ ಬೂದಿ ಗಾಳಿಯಲಿ ತೂರಿ ಬಿಡಿ ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ; ಬೂದಿ ಗೊಬ್ಬರದಿಂದ ತೆನೆಯಿಂದು ನೆಗೆದು ಬರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ.
  —ದಿನಕರ ದೇಸಾಯಿ
- ಎಲವಿಲ್ಲ ನಾಲಿಗೆಗೆ, ಬಲವಿಲ್ಲ ಬಡವಂಗೆ ತೊಲೆಕಂಬವಿಲ್ಲ ಗಗನಕ್ಕೆ ದೇವರಲ್ಲಿ ಕುಲಭೇದವಿಲ್ಲ.
  —ಸರ್ವಜ್ಞ
- ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ ಅವರು ತಮ್ಮ ಸುಖವನ್ನೂ ಹೆಚ್ಚಿಸಿಕೊಳ್ಳುತ್ತಾರೆ.
  —ಶಿವರಾಮ ಕಾರಂತ
- ಯಾರು ತನಗಾಗಿ ಬದುಕುತ್ತಾನೋ ಅವನು ಸತ್ತು ಹೋಗುತ್ತಾನೆ. ಯಾರು ತನ್ನ ಸಮಾಜಕ್ಕಾಗಿ ಸಾಯುತ್ತಾನೋ ಅವನು ಯಾವಾಗಲೂ ಮಹಾತ್ಮನಾಗಿರುತ್ತಾನೆ.
  —ಅಂಬೇಡ್ಕರ್